

بسم اللهِ الرّحمٰنِ الرّحيم

## ಯು.ಕೆ. ಜಲ್ಸ ಸಾಲಾನ – ಜಲ್ಸದಲ್ಲಿ ಭಾಗವಹಿಸುವವರು ಗಮನಿಸಬೇಕಾದ ಕೆಲವು ಮುಖ್ಯ ಸಂಗತಿಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಹದೀಖತುಲ್ ಮಹ್‌ದಿ'** ಜಲ್ಸಾಗಾಹ್‌ದಿಂದ **21-08-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಜುಮುಅ ನಮಾಝ್ ನಂತರ ಬ್ರಿಟನಿನ ಜಲ್ಸ ಸಾಲಾನ ಕ್ರಮಬದ್ಧವಾಗಿ ಇನ್‌ಶಾಅಲ್ಲಾಹ್ ಆರಂಭವಾಗುವುದು. ಜಲ್ಸದ ಕಾರ್ಯಕ್ರಮಗಳ ಪ್ರಕಾರ ಜಲ್ಸದ ಪ್ರಥಮ ಸಮಾವೇಶ ಜುಮುಅದ ನಂತರ ಪ್ರಾರಂಭವಾಗುವುದು. ಆದರೆ ಜುಮುಅಕ್ಕೆ ಸಹ ಒಂದು ಮಹತ್ವವಿದೆ ಎಂದು ನೆನಪಿಡಬೇಕಾಗಿದೆ. ಅದರ ಮಹತ್ವವನ್ನು ದೃಷ್ಟಿಯಲ್ಲಿರಿಸಿಕೊಂಡು ಜುಮುಅಕ್ಕೆ ಸಂಬಂಧಿಸಿ ನಮ್ಮ ಕರ್ತವ್ಯಗಳನ್ನು ಈಡೇರಿಸಬೇಕಾಗಿವೆ. ಇಂದು ಜಲ್ಸದ ಕಾರಣದಿಂದ, ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುತ್ತಿರುವಾಗ ಜಲ್ಸವು ಅನುಗ್ರಹಭರಿತವಾಗಲಿ ಎಂದು ಪ್ರಾರ್ಥಿಸುತ್ತಾ ಇರಬೇಕು. ಜುಮುಅದ ಮಹತ್ವದ ಬಗ್ಗೆ ಹದೀಸುಗಳಲ್ಲಿ ಉಲ್ಲೇಖಿತವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ದಿನಗಳಲ್ಲಿ ಶ್ರೇಷ್ಠವಾದುದು ಜುಮುಅದ ದಿನವಾಗಿದೆ. ಈ ದಿನ ನನಗೋಸ್ಕರ ಬಹಳ ಹೆಚ್ಚು ದುರೂದ್ ಪ್ರಾರ್ಥನೆ ಮಾಡಿರಿ. ನಿಮ್ಮ ದುರೂದ್‌ಗಳು ನನ್ನ ಮುಂದೆ ಇರಿಸಲ್ಪಡುವುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದರು: ಜುಮುಅದ ದಿನ ಎಂತಹ ಒಂದು ವೇಳೆ ಇರುತ್ತದೆ ಎಂದರೆ ಆ ವೇಳೆಯಲ್ಲಿ ಸತ್ಯವಿಶ್ವಾಸಿ ಮಾಡುವ ಎಲ್ಲ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸುತ್ತಾನೆ. ಇದು ಬಹಳ ಚಿಕ್ಕ ಅವಧಿಯ ವೇಳೆಯಾಗಿದೆ ಎಂದು ಹೇಳಿರುವರು.

ಜುಮುಅದ ಮಹತ್ವ ಮೇಲೆ ವಿವರಿಸಿದಂತೆ ಇದೆ. ನಾವು ನಮಾಝ್ ಮಾಡುವಾಗ ಮತ್ತು ಜುಮುಅದ ಆರಾಧನೆಯ ಒಂದು ಭಾಗವಾದ ಖುತ್‌ಬ ಆಲಿಸುವಾಗ ಮಾಡುವ ಎಲ್ಲಾ ಪ್ರಾರ್ಥನೆಗಳಿಗಿಂತ ಹೆಚ್ಚು ಮಹತ್ವಪೂರ್ಣವಾದುದು ದುರೂದ್ ಪ್ರಾರ್ಥನೆಯಾಗಿದೆ. ಶ್ರದ್ಧಾಪೂರ್ವಕವಾಗಿ ದುರೂದ್ ಪ್ರಾರ್ಥನೆ ಮಾಡಿರಿ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್** ಎಂದು ಹೇಳುವಾಗ ಅದರ ಅರ್ಥ ಗ್ರಹಿಸಿ ಪ್ರಜ್ಞಾಪೂರ್ವಕವಾಗಿ ಪ್ರಾರ್ಥಿಸಿರಿ. ಓ ಅಲ್ಲಾಹ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೀರ್ತಿಯನ್ನು ಹಬ್ಬಿಸು. ಅವರ ಸುಂದರ ಸಂದೇಶ ಮತ್ತು ಉಪದೇಶಗಳಿಗೆ ಜಯವನ್ನು ದಯಪಾಲಿಸು. ಅವರು ತಂದ ಶರೀಅತನ್ನು ನೈಜ ರೂಪದಲ್ಲಿ ಸ್ಥಾಪಿಸಿ ಅದರ ಭವ್ಯತೆ ಮತ್ತು ಶ್ರೇಷ್ಠತೆಯನ್ನು ಲೋಕಕ್ಕೆ ಸಾಬೀತುಪಡಿಸಿಕೊಡು. ಅದನ್ನು ಹಬ್ಬಿಸಲು ಸಹಾಯಕರಾಗುವ ಭಾಗ್ಯ ನಮಗೆ ನೀಡು. ಅವರ ಸಮುದಾಯಕ್ಕೆ ವಿಧಿಸಲ್ಪಟ್ಟ ಪಾರಿತೋಷಕಗಳಿಗೆ ನಮ್ಮನ್ನು ಸಹ ಪಾಲುದಾರರನ್ನಾಗಿ ಮಾಡು. ಅದೇರೀತಿ ನಾವು **ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್** ಎಂದು ಹೇಳುವಾಗ ನಾವು ಈ ಯೋಚನೆ ಹೊಂದಿ ಹೇಳಬೇಕು. ಅಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ನೀನು ವಿಧಿಸಿರುವ ಗೌರವ, ವೈಭವ, ಹಿರಿತನಗಳನ್ನು ಸ್ಥಿರವಾಗಿ ಸ್ಥಾಪಿಸಿ ಶತ್ರುಗಳನ್ನು ಸೋತು ಹೋಗುವವರನ್ನಾಗಿ ಮಾಡು. ಅದನ್ನು ನಾವು ಕಾಣುವಂತೆಯೂ ಆ ಪ್ರಕ್ರಿಯೆಯಲ್ಲಿ ನಾವು ನಮ್ಮ ಪಾಲು ವಹಿಸುವಂತೆಯೂ ಮಾಡು. ಹಾಗೆ ನಾವು ಆ ವಿಜಯದ ದೃಶ್ಯಗಳನ್ನು ಕಾಣುವಂತಾಗಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಹೂಡುವ ಎಲ್ಲಾ ಗೂಢ ತಂತ್ರಗಳು ಮತ್ತು ಪ್ರಯತ್ನಗಳು ಶತ್ರುಗಳ ಮೇಲೆಯೇ ತಿರುಗಿ ಬೀಳುವಂತಾಗಲಿ. ನಾವು ಇಂದು ಇಲ್ಲಿ ಜಮಾಯಿಸಿ ಸಾಮೂಹಿಕವಾಗಿ ಈ ಪ್ರಾರ್ಥನೆಗಳನ್ನು ಮಾಡುವಾಗ ಅಲ್ಲಾಹನ ಸನ್ನಿಧಿಯಲ್ಲಿ ನಿಶ್ಚಯವಾಗಿಯೂ ಪ್ರೀತಿ ಮತ್ತು ಅಂಗೀಕಾರದ ದೃಷ್ಟಿ ಬೀರಲ್ಪಡುವುದು. ನಾವು ಈ ಅಂಗೀಕಾರದ ಅನುಗ್ರಹಗಳಿಸುವೆವು ಮತ್ತು ಜಾರಿಗೊಳ್ಳುವ ಈ ಅನುಗ್ರಹದಿಂದ ನಾವು ಪಾಲು ಗಳಿಸುತ್ತಾ ಹೋಗುವೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವವರು ಮಾಡುವ ಈ ರೀತಿಯ ಪ್ರಾರ್ಥನೆಗಳು ಅವರಿಗೆ ತಲಪುವಾಗ ಅವರು ನಮಗೋಸ್ಕರ ಮಾಡಿದ ಪ್ರಾರ್ಥನೆಗಳ ಅನುಗ್ರಹಗಳು ನಮಗೆ ಸಹ ತಲಪುವುವು. ಈ ರೀತಿ ಅನುಗ್ರಹಗಳ ಒಂದು ಶೃಂಖಲೆ ಪ್ರಾರಂಭವಾಗುವುದು. ನಮ್ಮ ಜಲ್ಸಗಳ ಒಂದು ದೊಡ್ಡ ಉದ್ದೇಶವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ್ದು ಮತ್ತು ಬೈಅತ್ ಮಾಡುವುದರ ಉದ್ದೇಶ ಲಕ್ಷ್ಯವನ್ನೂ ವಿವರಿಸಿದ್ದು ಈ ರೀತಿಯಾಗಿದೆ: ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ನಮ್ಮ ಹೃದಯಗಳಲ್ಲಿ ಉಕ್ಕಿ ಹರಿಯಬೇಕು ಎಂಬುದಾಗಿದೆ. ನಾವು ಹೃತ್ಪೂರ್ವಕವಾಗಿ ದುರೂದ್ ಪ್ರಾರ್ಥನೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಮಾಡುವಾಗ ನಮ್ಮ ಹೃದಯದಲ್ಲಿ ಅವರ ಬಗ್ಗೆ ಪ್ರೀತಿ ತುಂಬಿ ತುಳುಕುತ್ತದೆ. ನಾವು ನಮ್ಮ ಹೃದಯದ ತಳದಿಂದ ಅವರಿಗೆ ದುರೂದ್ ಪ್ರಾರ್ಥನೆ ಅರ್ಪಿಸಬೇಕು. ಏಕೆಂದರೆ ಅಲ್ಲಾಹನು ಸಹ ಇದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಆಜ್ಞಾಪಿಸಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಮುಂದಿರಿಸಿದ ಆದರ್ಶ ಜೀವಿತ ಮಾದರಿಯನ್ನು ಅನುಸರಿಸಿ ವರ್ತಿಸಬೇಕು ಮತ್ತು ಅದಕ್ಕೋಸ್ಕರ ಪ್ರಯತ್ನಿಸಬೇಕು. ನಾವು

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸಿ ಅವರಿಗೆ ದುರೂದ್ ಪ್ರಾರ್ಥನೆ ಮಾಡಿ ಅವರ ನಡೆವಳಿಕೆಗಳನ್ನು ಅನುಸರಿಸುವವರಾದರೆ ನಾವು ಅಲ್ಲಾಹನ ಪ್ರೀತಿಯನ್ನು ಗಳಿಸುವವರಾಗುವೆವು.

ಆದುದರಿಂದ ಜುಮುಅದ ಸಮಯದಲ್ಲೂ ಜುಮುಅದ ನಂತರವೂ ವಿಶಿಷ್ಟವಾಗಿ ಮುಂದಿನ ಎರಡು ದಿನಗಳಲ್ಲೂ ಶ್ರದ್ಧೆಯಿಂದ ದುರೂದ್ ಮತ್ತು ಝಿಕ್ರೆ ಇಲಾಹಿ (ದೇವ ನಾಮಸ್ಮರಣೆ) ಮಾಡುವುದರಲ್ಲಿ ಪ್ರತಿಯೊಂದು ಕ್ಷಣವನ್ನು ಕಳೆಯಲು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ಅಲ್ಲಾಹನು ನಮ್ಮ ಮೇಲೆ ದಯೆದೋರುವನು. ನಮ್ಮ ಶತ್ರುಗಳ ಎಲ್ಲ ಕಾರ್ಯಯೋಜನೆಗಳನ್ನು ಅವರ ಮೇಲೆಯೇ ಬೀಳಿಸುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತ್ಯುತ್ತಮ ಜೀವಿತ ಮಾದರಿಯಲ್ಲಿ ಹುಖೂಖುಲ್ ಇಬಾದ್ (ಸೃಷ್ಟಿಗಳ ಸೇವೆಯ) ವೈಭವಶಾಲಿ ಉದಾಹರಣೆಗಳು ನಮಗೆ ದೊರಕುತ್ತವೆ. ಅವುಗಳನ್ನು ಈಡೇರಿಸಲು ನಾವು ಪ್ರಯತ್ನಿಸಬೇಕು. ಅವುಗಳನ್ನು ನಮ್ಮ ಕರ್ತವ್ಯಗಳನ್ನಾಗಿ ಮಾಡಬೇಕು.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳ ಲಕ್ಷಣವಾಗಿ ಹೀಗೆ ಹೇಳಿದ್ದಾನೆ. ಅವರು ಪರಸ್ಪರ ಪ್ರೀತಿಸುವವರೂ ದಯಾಭಾವನೆಯಿಂದ ಪರಸ್ಪರ ವರ್ತಿಸುವವರೂ ಆಗಿರುತ್ತಾರೆ. ಇದಕ್ಕೆ ಸಂಬಂಧಿಸಿ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಮಾದರಿ ನಮಗೆ ಕಾಣಿಸುತ್ತದೆ. ಅದನ್ನು ಅಲ್ಲಾಹನು ಹೀಗೆ ಚಿತ್ರಿಸಿದ್ದಾನೆ: **ಅಝೀಝುನ್ ಅಲೈಹಿ ಮಾಅನಿತ್ತುಮ್** 'ನೀವು ಕಷ್ಟಕ್ಕೀಡಾಗುವುದು ಅವರನ್ನು ವ್ಯಾಕುಲ ಗೊಳಿಸುತ್ತದೆ.' (ಪವಿತ್ರ ಖುರ್‌ಆನ್ 9: 128) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸತ್ಯವಿಶ್ವಾಸಿಗಳ ಬಗ್ಗೆ ಎಷ್ಟು ಪ್ರೀತಿ ಇತ್ತೆಂದರೆ ಅವರಿಗೆ ಸ್ವಲ್ಪ ಮಾತ್ರ ಕಷ್ಟವುಂಟಾಗುವುದು ಪೈಗಂಬರರಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಸತ್ಯವಿಶ್ವಾಸಿಗಳಿಗುಂಟಾಗುವ ಸ್ವಲ್ಪ ಮಾತ್ರ ಕಷ್ಟವೂ ಸಹ ಅವರನ್ನು ಅಸ್ವಸ್ಥರನ್ನಾಗಿ ಮಾಡುತ್ತಿತ್ತು. ಈ ಜೀವಿತ ಮಾದರಿಯನ್ನು ನಮ್ಮ ಮುಂದೆ ಇರಿಸಲಾಗಿದೆ. ಒಬ್ಬರಿನ್ನೊಬ್ಬರಿಗೆ ಉಂಟಾಗುವ ಕಷ್ಟ ನಿಮ್ಮನ್ನು ಚಿಂತಿತರನ್ನಾಗಿ ಮಾಡಬೇಕಾಗಿದೆ. ಆದರೆ ವಾಸ್ತವಿಕವಾದ ಪ್ರೀತಿ ಮತ್ತು ದಯೆಯ ಭಾವನೆ ಉಂಟಾದರೆ ಮಾತ್ರ ಹೀಗೆ ಆಗಲು ಸಾಧ್ಯವಾಗುತ್ತದೆ.

ಜಲ್ಸವನ್ನು ಜರಗಿಸುವ ಉದ್ದೇಶಗಳಲ್ಲಿ ಒಂದು ಹೀಗೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ್ದಾರೆ: ಜಮಾಅತಿನ ಜನರಲ್ಲಿ ಭ್ರಾತೃಭಾವನೆಯಿಂದ ಕೂಡಿದ ಸಂಬಂಧ ಸ್ಥಾಪಿತವಾಗಬೇಕು. ಆದರೆ ಭ್ರಾತೃಭಾವನೆಯ ಸಂಬಂಧ ಸ್ಥಾಪಿಸಲ್ಪಡಬೇಕಾದರೆ ನಿಸ್ವಾರ್ಥರಾಗಿ ಒಬ್ಬರು ಇನ್ನೊಬ್ಬರಿಗೋಸ್ಕರ ತ್ಯಾಗ ಸಹಿಸಲು ಸಿದ್ಧರಾಗಬೇಕು. ಒಬ್ಬರಿನ್ನೊಬ್ಬರ ಭಾವನೆಗಳ ಬಗ್ಗೆ ಲಕ್ಷ್ಯ ನೀಡಬೇಕು. ಪ್ರಾರಂಭದ ಘಟ್ಟಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಚ್ಛಿಸಿದ ರೀತಿಯಲ್ಲಿ ಜನರು ತರಬೇತಿ ಹೊಂದಿರಲಿಲ್ಲ. ಅವರಲ್ಲಿ ತ್ಯಾಗ ಮನೋಭಾವ ಸಹ ಅಷ್ಟೊಂದು ಇರಲಿಲ್ಲ. ಆದರೆ ನಂಬಿಕೆಗಳ ವಿಷಯದಲ್ಲಿ ಬಹಳ ಬಲಿಷ್ಠರಾಗಿದ್ದರು. ಆದರೆ ಅಂದಿನ ಪರಿಸ್ಥಿತಿಯ ಪ್ರಭಾವದಿಂದ ಹುಖೂಖುಲ್ ಇಬಾದ್ (ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದು) ಪ್ರೀತಿ, ಭ್ರಾತೃಭಾವನೆ ಅವರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಚ್ಛಿಸಿದ ಮಟ್ಟವನ್ನು ತಲಪಿರಲಿಲ್ಲ. ಆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೂರುಗಳು ಬಂದವು. ಜಲ್ಸದಲ್ಲಿ ಒಬ್ಬರಿನ್ನೊಬ್ಬರ ಬಗ್ಗೆ ಕಾಳಜಿ ವಹಿಸಲಿಲ್ಲ. ಪ್ರತಿಯೊಬ್ಬನು ತನ್ನ ಆರಾಮದ ಬಗ್ಗೆ ಮಾತ್ರ ಚಿಂತಿಸುತ್ತಿದ್ದನು. ಕೆಲವರು ತಮ್ಮ ಸುಖಕ್ಕೆ ಅನ್ಯರ ಸುಖದ ಮೇಲೆ ಆದ್ಯತೆ ನೀಡಿದರು. ಈ ವಿಷಯಗಳನ್ನು ತಿಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತೀವ್ರವಾಗಿ ಅತೃಪ್ತಿ ಸೂಚಿಸಿದರು. ಈ ಕಾರಣದಿಂದ ಒಂದು ವರ್ಷ ಜಲ್ಸ ಸಾಲಾನವನ್ನು ರದ್ದುಗೊಳಿಸಿದರು. ಅವರು ಹೇಳಿದರು: ನಾನು ಸತ್ಯವಾಗಿ ಹೇಳುತ್ತೇನೆ. ತನ್ನ ಸಹೋದರನ ಸುಖಕ್ಕೆ ತನ್ನ ಸುಖಕ್ಕಿಂತ ಸಾಧ್ಯವಾದಷ್ಟು ಆದ್ಯತೆ ನೀಡುವ ತನಕ ಮನುಷ್ಯನ ವಿಶ್ವಾಸ ಖಂಡಿತವಾಗಿಯೂ ಸರಿಯಾಗಲಾರದು.

ತನ್ನ ಜಮಾಅತಿನ ಜನರಲ್ಲಿ ಭ್ರಾತೃಭಾವನೆ ಮತ್ತು ಪ್ರೀತಿಯನ್ನು ಕಾಣಬೇಕೆಂಬ ಎಂತಹ ಹೃತ್ಪೂರ್ವಕ ಭಾವನೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿತ್ತೆಂದು ನೋಡಿರಿ. ತನ್ನನ್ನು ನಂಬುವವರು ಒಬ್ಬರಿನ್ನೊಬ್ಬರ ಕಷ್ಟದ ಬಗ್ಗೆ ಏಕೆ ಕಾಳಜಿ ವಹಿಸುವುದಿಲ್ಲ ಎಂಬ ಭಾವನೆಯಿಂದ ಅವರು ವ್ಯಾಕುಲಚಿತ್ತರಾಗುತ್ತಿದ್ದರು. ಜಲ್ಸಕ್ಕೆ ಆಗಮಿಸುವವರು ಜಲ್ಸದ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಅಲ್ಲಾಹನ ಬಗ್ಗೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿಯನ್ನು ತಮ್ಮಲ್ಲಿ ಉಂಟುಮಾಡಬೇಕಲ್ಲದೆ ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವದ ಭಾವನೆಯನ್ನು ವರ್ಧಿಸುವಂತೆ ಮಾಡಬೇಕು ಎಂಬುದು ಅವರ ಆಗ್ರಹವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಉದ್ದೇಶದ ಬಗ್ಗೆ ಮತ್ತು ಜಲ್ಸದಲ್ಲಿ ಭಾಗವಹಿಸುವವರಲ್ಲಿ ಇರಬೇಕಾದ ಭಾವನೆಗಳ ಬಗ್ಗೆ ಹೀಗೆ ಹೇಳಿದ್ದಾರೆ:

"ಜಲ್ಸಕ್ಕೆ ನಿಗದಿ ಪಡಿಸಿದ ದಿನಾಂಕಗಳಲ್ಲಿ ಎಲ್ಲ ಸ್ನೇಹಿತರು ಅಲ್ಲಾಹನಿಗೋಸ್ಕರ, ದೈವಿಕ ಮಾತುಗಳನ್ನು ಆಲಿಸಲು ಮತ್ತು ಪ್ರಾರ್ಥನೆಗಳಲ್ಲಿ ಭಾಗವಹಿಸಲು ಸಾಧ್ಯವಿರುವಷ್ಟು ಮಟ್ಟಿಗೆ ಆಗಮಿಸಬೇಕು. ಈ ಜಲ್ಸದಲ್ಲಿ ಎಂತಹ ವಾಸ್ತವಿಕ ಜ್ಞಾನವನ್ನು ಜನರಿಗೆ ಕೇಳಿಸುವಂತೆ ಮಾಡಲಾಗುವುದೆಂದರೆ ಅವರ ವಿಶ್ವಾಸ ದೃಢವಾಗುವುದು ಮತ್ತು ಜ್ಞಾನ ವರ್ಧಿಸುವುದು. ಸ್ನೇಹಿತರ ಬಗ್ಗೆ ವಿಶಿಷ್ಟ ಪ್ರಾರ್ಥನೆಗಳನ್ನು ಮಾಡಲಾಗುವುದು. ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಲಾಗುವುದು ಮತ್ತು ಅವರು ಅಲ್ಲಾಹನ ಸಾಮೀಪ್ಯಗಳಿಸುವಂತೆಯೂ, ಅವರಲ್ಲಿ ಪರಿಶುದ್ಧ ಪರಿವರ್ತನೆ ಉಂಟಾಗಲಿ ಎಂದೂ ಪ್ರಾರ್ಥಿಸಲಾಗುವುದು. ಈ ಜಲ್ಸದ ಇನ್ನೊಂದು ತಾತ್ಕಾಲಿಕ ಲಾಭವೇನೆಂದರೆ ಒಂದು

ವರ್ಷದ ಅವಧಿಯಲ್ಲಿ ಈ ಜಮಾಅತಿನಲ್ಲಿ ಸೇರಿದ ಸಹೋದರರು ಈ ಜಲ್ಸದಲ್ಲಿ ಭಾಗವಹಿಸಿ ತಮಗಿಂತ ಮೊದಲು ಜಮಾಅತಿಗೆ ಸೇರಿದವರನ್ನು ಕಾಣುವರು, ಪರಸ್ಪರ ಪರಿಚಯಗೊಂಡು ಪರಸ್ಪರ ಸ್ನೇಹ ಬಾಂಧವ್ಯ ಸ್ಥಾಪಿಸಲು ಸಹಾಯಕವಾಗುವುದು. ಎಲ್ಲಾ ಸಹೋದರರು ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಲು, ಪರಸ್ಪರ ಸ್ನೇಹಭಾವನೆ ಬೆಳೆಸಲು ಸಾಧ್ಯವಾಗಲಿ ಎಂದು ಮಹೋನ್ನತನಾದ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಲಾಗುವುದು. ಈ ಆಧ್ಯಾತ್ಮಿಕ ಜಲ್ಸದಲ್ಲಿ ಬೇರೆ ಅನೇಕ ಆಧ್ಯಾತ್ಮಿಕ ಲಾಭಗಳು ಸಹ ಇವೆ. ಇನ್‌ಶಾಅಲ್ಲಾಹ್ ಮುಂದೆ ಕಾಲ ಕಾಲಕ್ಕೆ ಅವು ಪ್ರಕಟವಾಗುತ್ತಾ ಇರುವುವು.''

ನಮ್ಮ ಪೈಕಿ ಪ್ರತಿಯೊಬ್ಬನು ಜಲ್ಸದ ಉದ್ದೇಶಲಕ್ಷ್ಯವನ್ನು ಈಡೇರಿಸುವ ಬಗ್ಗೆ ಈ ದಿನಗಳಲ್ಲಿ ಲಕ್ಷ್ಯ ನೀಡುತ್ತಿರಬೇಕು. ಲೌಕಿಕ ಮೇಳಗಳ ಹಾಗೆ ಈ ಜಲ್ಸವನ್ನು ಭಾವಿಸಬಾರದು ಎಂದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ದೈವಿಕ ಮಾತುಗಳನ್ನು ಆಲಿಸಲು ನಾವು ಈ ಜಲ್ಸದ ಸಂದರ್ಭದಲ್ಲಿ ಲಕ್ಷ್ಯನೀಡಬೇಕು. ಪರಸ್ಪರ ಹರಟೆ ಹೊಡೆಯುತ್ತಾ ಕೂಟಗಳನ್ನು ಮಾಡಬಾರದು. ಪೇಟೆಯಲ್ಲಿ ತಿರುಗುತ್ತಾ ಸಮಯ ಹಾಳು ಮಾಡಬಾರದು. ಜಲ್ಸದ ಕಾರ್ಯಕ್ರಮಗಳಿಲ್ಲದ ಬಿಡುವು ಸಮಯದಲ್ಲಿ ಝಿಕ್ರೆ ಇಲಾಹಿ ಮಾಡುತ್ತಾ ಇರಬೇಕು. ಇಲ್ಲಿ ಕೆಲವು ಜಮಾಅತ್‌ಗಳು ವಿವಿಧ ರೀತಿಯ ಧಾರ್ಮಿಕ ವ್ಯವಸ್ಥೆಗಳನ್ನು ಮಾಡಿದ್ದಾರೆ. ಅವುಗಳ ಪ್ರಯೋಜನ ಪಡೆದು ಸತ್ಯವಿಶ್ವಾಸ ವರ್ಧಿಸುವಂತಾಗಲಿ. ಉದಾಹರಣೆಗೆ ಇಲ್ಲಿ ಮಖ್‌ಝುನೆ ತಸಾವೀರ್ ಎಂಬ ಫೋಟೋಗಳ ಪ್ರದರ್ಶನ ಏರ್ಪಡಿಸಲಾಗಿದೆ. ಅದನ್ನು ನೋಡಿರಿ. ಒಂದು ಜಮಾಅತ್ ತನ್ನ ಚರಿತ್ರೆಯ ಮಾಹಿತಿ ನೀಡುವ ಪ್ರದರ್ಶನ ಏರ್ಪಡಿಸಿದೆ. ಅದನ್ನು ನೋಡಿ ಅಲ್ಲಾಹನ ಅನುಗ್ರಹಗಳನ್ನು ನೆನಪಿಸಿರಿ. ಅಲ್ಲಾಹನು ಹೇಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸಿದ ಭವಿಷ್ಯವಾಣಿಗಳನ್ನು ಈಡೇರಿಸಿದನೆಂದು ನೋಡಿರಿ. ಅವರೊಂದಿಗೆ ಮಾಡಿದ ವಾಗ್ದಾನಗಳನ್ನು ಹೇಗೆ ಈಡೇರಿಸುತ್ತಾನೆಂದು ನೋಡಿರಿ. ಅಹ್ಮದಿಯಾ ಜಮಾಅತ್‌ನ ಪರಿಚಯ ಮತ್ತು ಪ್ರಚಾರ ಲೋಕದ ಎಲ್ಲೆಗಳ ತನಕ ಹೇಗೆ ತಲಪಿದೆ ಎಂಬುದನ್ನು ನೋಡಿರಿ. ಅಲ್ಲಿ ಶಹೀದ್ ಆದ ಜನರ (ಶುಹದಾ) ಚಿತ್ರಗಳಿವೆ. ಅವುಗಳನ್ನು ನೋಡಿ ಅವರ ಆಧ್ಯಾತ್ಮಿಕ ಪದವಿಯ ವರ್ಧನೆಗೆ, ನಿಮ್ಮ ಸ್ವಂತ ವಿಶ್ವಾಸ ದೃಢವಾಗುವ ಬಗ್ಗೆ ಮತ್ತು ಶಹೀದ್ ಆದವರ ಕುಟುಂಬದವರಿಗೋಸ್ಕರ ಮತ್ತು ಜಮಾಅತಿನ ಜನರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಎಲ್ಲ ಸ್ಥಳಗಳಲ್ಲೂ ಜಮಾಅತನ್ನು ಶತ್ರುಗಳ ಕೆಡುಕುಗಳಿಂದ ರಕ್ಷಿಸಲಿ.

ನಮ್ಮ ಪುಸ್ತಕ ಪ್ರಕಟನೆಯ ವಿಭಾಗದ ಒಂದು ಸ್ಟಾಲ್ ಸಹ ಇದೆ. ಅಲ್ಲಿಗೆ ಹೋಗಿ ಈ ವರ್ಷ ಹೊಸದಾಗಿ ಪ್ರಕಟಿಸಲಾದ ಗ್ರಂಥಗಳನ್ನು ನೋಡಿರಿ. ಖರೀದಿಸಲು ಸಾಧ್ಯವಿರುವವರು ಖರೀದಿಸಬೇಕು. ಹಿಂದೆ ಪ್ರಕಟವಾದ ಪುಸ್ತಕಗಳು ಯಾರ ಬಳಿ ಇಲ್ಲವೋ ಅವರು ಅವುಗಳನ್ನು ಖರೀದಿಸಲು ಪ್ರಯತ್ನಿಸಬೇಕು. ಅದೇ ರೀತಿ ರಿವ್ಯೂ ಆಫ್ ರಿಲೀಜಿಯನ್ಸ್ ಮಾಸಿಕದ ಒಂದು ಸ್ಟಾಲ್ ಇದೆ. ಹಝ್ರತ್ ಈಸಾ ಅಲೈಹಿಸ್ಸಲಾಮರ ಶವ ವಸ್ತ್ರದ (ಕಫನ್) ಬಗ್ಗೆ ಹೆಚ್ಚಿನ ಮಾಹಿತಿ ಸಹ ಪ್ರಕಟಿಸಲಾಗಿದೆ. ಅದನ್ನು ನೋಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯ ಪುರಾವೆಗಳು, ಇವುಗಳನ್ನು ನೋಡಿ ನಿಮ್ಮ ವಿಶ್ವಾಸ ದೃಢಪಡಿಸಿರಿ. ಜಲ್ಸದ ಕಾರ್ಯಕ್ರಮಗಳಲ್ಲದೆ ವಿವಿಧ ಭಾಷೆಗಳ ಬೇರೆ ಕಾರ್ಯಕ್ರಮಗಳೂ ಇವೆ. ಅವುಗಳಿಂದ ಪ್ರಯೋಜನ ಪಡೆಯಿರಿ. ಜಲ್ಸದ ಮುಖ್ಯ ಕಾರ್ಯಕ್ರಮಗಳ ನಂತರ ಪರಸ್ಪರ ಪರಿಚಯ ಹೊಂದಲು ಪರಸ್ಪರ ಭೇಟಿಯಾಗಿರಿ. ಇಲ್ಲಿಗೆ ಹೊಸದಾಗಿ ಆಗಮಿಸಿದ ಅಹ್ಮದಿಯರು ಜಲ್ಸದ ನಂತರ ಹೇಳುತ್ತಾರೆ, ನಮ್ಮ ಭಾಷೆ ಬೇರೆಯಾಗಿದ್ದರೂ ನಾವು ವಿವಿಧ ಜನಾಂಗಗಳ ಅಹ್ಮದಿಯರನ್ನು ಬೇಟಿಯಾಗಿ ಸಂಜ್ಞೆಗಳ ಮೂಲಕ ಪ್ರೀತಿಯನ್ನು ಪ್ರಕಟಿಸುತ್ತೇವೆ. ಮತ್ತು ಆ ಪ್ರೀತಿ ವರ್ಧಿಸುತ್ತಾ ಇರುತ್ತವೆ. ಅದರ ಬಗ್ಗೆ ವಿವರಿಸಲು ಶಬ್ದಗಳು ಸಿಗುವುದಿಲ್ಲ ಎಂದು ಹೇಳುತ್ತಾರೆ. ಪರಸ್ಪರ ಪ್ರೀತಿಯ ಭಾವನೆ ಬೆಳೆಯಬೇಕು ಮತ್ತು ಆಧ್ಯಾತ್ಮಿಕವಾಗಿ ಎಲ್ಲರೂ ಒಂದಾಗಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉಪದೇಶಿಸಿದ್ದಾರೆ. ಅದಕ್ಕೋಸ್ಕರ ಪ್ರಾರ್ಥಿಸಲು ಸಹ ಹೇಳಿದ್ದಾರೆ. ನಿಸ್ವಾರ್ಥ ಸ್ನೇಹ ಸಂಬಂಧ ಮತ್ತು ಪರಸ್ಪರ ಪ್ರಾರ್ಥನೆ ಮಾಡುವುದು ಎಂತಹ ಪರಿಸರ ಸೃಷ್ಟಿಸುತ್ತದೆ ಎಂದರೆ ಅದರ ಉದಾಹರಣೆಯನ್ನು ನಮ್ಮ ಇಂತಹ ಜಲ್ಸಗಳಲ್ಲಿ ಮಾತ್ರ ಕಾಣಲು ಸಾಧ್ಯ. ಆದುದರಿಂದ ಪ್ರತಿಯೊಬ್ಬನು ಈ ರೀತಿ ಪರಿಚಯ ಮತ್ತು ಸಂಬಂಧ ಸ್ಥಾಪಿಸಲು ಪ್ರಯತ್ನಿಸಬೇಕು. ಅಲ್ಲಾಹನಿಗೋಸ್ಕರ ಈ ಸಂಬಂಧ ಸ್ಥಾಪಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಆಧ್ಯಾತ್ಮಿಕ ಪ್ರಯೋಜನಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಅನುಯಾಯಿಗಳಿಗೆ ಸಿಗಲಿ ಎಂದು ಯೋಚಿಸಿದ ಆಧ್ಯಾತ್ಮಿಕ ಲಾಭಗಳು ನಮಗೆ ದೊರೆಯುವಂತಾಗಲಿ ಎಂದು ಪ್ರಾರ್ಥಿಸಿರಿ. ನಮ್ಮ ಪೈಕಿ ಪ್ರತಿಯೊಬ್ಬರು ನಿಷ್ಠಾಪೂರ್ವಕವಾಗಿ ಜಲ್ಸದ ಕಾರ್ಯಕ್ರಮಗಳನ್ನೆಲ್ಲಾ ಆಲಿಸಬೇಕೆಂಬುದರ ಬಗ್ಗೆ ಲಕ್ಷ್ಯ ನೀಡಬೇಕು. ಹಾಗೆ ಮಾಡದಿದ್ದರೆ ನೀವು ಇಲ್ಲಿಗೆ ಬರಲು ಮಾಡಿದ ಖರ್ಚು, ಹಾಗೂ ಜಮಾಅತ್ ಈ ಕಾರ್ಯಕ್ರಮಗಳನ್ನು ವಿಶಾಲವಾಗಿ ಜರಗಿಸಲು ಮಾಡಿದ ಇಷ್ಟು ಹೆಚ್ಚಿನ ಖರ್ಚು ಎಲ್ಲಾ ನಿರರ್ಥಕವಾಗುವುವು.

ಜಲ್ಸಕ್ಕೆ ಆಗಮಿಸುವ ಅತಿಥಿಗಳು ಮತ್ತು ಜಲ್ಸದಲ್ಲಿ ಭಾಗವಹಿಸುವವರು ತಾವು ಜಲ್ಸದಲ್ಲಿ ಭಾಗವಹಿಸಿದ ಉದ್ದೇಶವನ್ನು ತಮ್ಮ ಮುಂದೆ ಇರಿಸಿ ಹೆಚ್ಚು ಹೆಚ್ಚಾದ ಅನುಗ್ರಹ ಪಡೆಯಲು ಪ್ರಯತ್ನಿಸಬೇಕು. ಅಲ್ಲಾಹನು ನಿಮಗೆಲ್ಲರಿಗೂ ಅಂತಹ ಭಾಗ್ಯ ದಯಪಾಲಿಸಲಿ. ಜಮಾಅತಿನ ಜಲ್ಸದ ವ್ಯವಸ್ಥಾಪಕರೊಂದಿಗೆ ಸಂಪೂರ್ಣವಾಗಿ ಸಹಕರಿಸಿರಿ. ವ್ಯವಸ್ಥಾಪಕರು ನಿಮ್ಮ ಸೇವೆಗಾಗಿಯೂ ನಿಮ್ಮ

ಪ್ರಯೋಜನಕ್ಕಾಗಿಯೂ ಕೆಲಸ ಮಾಡುವವರಾಗಿದ್ದಾರೆ. ನೀವು ಸಹಕಾರ ನೀಡಿದರೆ ವ್ಯವಸ್ಥೆ ಸರಿಯಾಗಿ ನಡೆಯುವುದು. ಜಲ್ಸದಲ್ಲಿ ಕುಳಿತುಕೊಳ್ಳಲು ನೀಡಲಾಗುವ ಮಾರ್ಗದರ್ಶನಗಳನ್ನು ಪುರುಷರೂ ಮಹಿಳೆಯರೂ ಮಕ್ಕಳೂ ಅನುಸರಿಸಬೇಕು. ಊಟದ ವ್ಯವಸ್ಥೆ ಮಾಡಿರುವ ಡೇರೆಗಳಿಗೆ ಹೋಗಲು ಮಾರ್ಗಸೂಚಿಗಳನ್ನು ನೀಡಲಾಗಿವೆ. ಅವುಗಳನ್ನು ಸಹ ಪಾಲಿಸಿರಿ. ಊಟದ ವ್ಯವಸ್ಥೆ ಮಾಡುವವರು ಸಹ ಕೆಲವು ವಿಷಯಗಳನ್ನು ಗಮನಿಸಬೇಕು. ಕೆಲವರು ರೋಗದ ಕಾರಣದಿಂದ ಅಥವಾ ಬೇರೆ ಕಾರಣದಿಂದ ಊಟ ಮಾಡಲು ತಡವಾಗಿ ಬರಬಹುದಾಗಿದೆ. ಮಕ್ಕಳಿರುವ ಕೆಲವು ತಾಯಂದಿರು ಊಟದ ಸಮಯವಲ್ಲದೆ ಬೇರೆ ಸಮಯದಲ್ಲೂ ಆಹಾರಕ್ಕೆ ಆವಶ್ಯಪಡಬಹುದು. ಇಂತಹ ಜನರಿಗೆ ಆಹಾರ ನೀಡಲು ಏನಾದರೂ ವ್ಯವಸ್ಥೆ ಇರಬೇಕಾಗಿದೆ. ಜಲ್ಸದ ಕಾರ್ಯಕ್ರಮ ನಡೆಯುವಾಗ ಬಜಾರು ಬಂದಾಗಿರುತ್ತದೆ. ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿ ಅವುಗಳ ಲಾಭ ಪಡೆಯಲು ಪ್ರಯತ್ನಿಸಬೇಕು. ಸ್ವಲ್ಪ ಮಟ್ಟಿನ ಅನುಮತಿಯ ಲಾಭ ಪಡೆದು ವ್ಯವಸ್ಥಾಪಕರನ್ನು ತೊಂದರೆಪಡಿಸಬಾರದು. ಮಕ್ಕಳನ್ನು ಹೊಂದಿರುವ ತಾಯಂದಿರು ಮಕ್ಕಳಿಗೋಸ್ಕರ ತಿನ್ನಲು ಏನಾದರೂ ತರಬೇಕು. ಅವರಿಗೆ ತಿಂಡಿ ತಿನ್ನಿಸುವಾಗ ಬೇರೆಯೇ ಹೋಗಿ ತಿನ್ನಿಸಿರಿ. ಮಕ್ಕಳಿರುವ ತಾಯಂದಿರಿಗೆ ಬೇರೆಯೇ ಡೇರೆಗಳು ವ್ಯವಸ್ಥೆಗೊಳಿಸಲಾಗಿವೆ.

ಅದೇರೀತಿ ಸಂಚಾರ ವ್ಯವಸ್ಥಾಪಕರೊಂದಿಗೆ ಪೂರ್ಣವಾಗಿ ಸಹಕರಿಸಿರಿ. ಭದ್ರತೆಯ ವ್ಯವಸ್ಥೆಯೊಂದಿಗೆ ಸಹ ಪೂರ್ಣವಾಗಿ ಸಹಕರಿಸಿರಿ. ಪ್ರತಿಯೊಬ್ಬ ಅಹ್ಮದಿ ತನ್ನ ಸುತ್ತು ಮುತ್ತಲೂ ದೃಷ್ಟಿ ಇರಿಸಬೇಕು. ನಮ್ಮ ಜಮಾಅತಿನ ಅಭಿವೃದ್ಧಿಯ ಕಾರಣ ಜಮಾಅತ್ ವಿರುದ್ಧ ಅಸೂಯೆ ಹೊಂದಿರುವವರ ಕೆಡುಕುಗಳು ಸಹ ವರ್ಧಿಸುತ್ತಿವೆ. ಆದುದರಿಂದ ಬಹಳ ಜಾಗರೂಕರಾಗಿರಬೇಕು. ಅಸೂಯೆಗಾರರ ಅಸೂಯೆಗಳಿಂದ, ದುಷ್ಟ ಜನರ ದುಷ್ಕೃತ್ಯಗಳಿಂದ ಜಮಾಅತ್ ರಕ್ಷಣೆ ಪಡೆಯಲಿ ಎಂದು ಬಹಳವಾಗಿ ಪ್ರಾರ್ಥಿಸಬೇಕು. ನಾನು ಹಿಂದೆ ಸಹ ಹೇಳಿದ್ದೇನೆ. ಈ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರಾರ್ಥಿಸಿರಿ. ಜಲ್ಸವನ್ನು ಅಲ್ಲಾಹನು ಅನುಗ್ರಹ ಭರಿತವನ್ನಾಗಿ ಮಾಡಲಿ ಎಂದು ಪ್ರಾರ್ಥಿಸಿರಿ. ಜಲ್ಸದ ಕಾರ್ಯಕ್ರಮಗಳ ಪಟ್ಟಿ ಪ್ರತಿಯೊಬ್ಬರಿಗೂ ನೀಡಲಾಗುತ್ತಿದೆ. ಅದರಲ್ಲಿ ಬರೆದಿರುವ ಮಾರ್ಗದರ್ಶನಗಳನ್ನು ಲಕ್ಷ್ಯವಿಟ್ಟು ಓದಿರಿ ಮತ್ತು ಕಾರ್ಯಪ್ರವೃತ್ತರಾಗಿರಿ. ಎಲ್ಲರಿಗೂ ಅಲ್ಲಾಹನು ತಕ್ಕುದಾದ ಪ್ರತಿಫಲ ನೀಡಿ ಅನುಗ್ರಹಿಸಲಿ – ಆಮೀನ್.

{ಖುತ್‌ಬದ ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, 2015 ಅಗಸ್ಟ್ ದಿನಾಂಕ 19ರಂದು ಡೇರಾ ಗಾಝೀಖಾನ್ ಪ್ರದೇಶದ ನೋನ್‌ಸದಲ್ಲಿ ಶಹೀದರಾದ ಇಕ್ರಾಮುಲ್ಲಾ ಸಾಹೇಬರ ಬಗ್ಗೆ ಪ್ರಸ್ತಾಪಿಸಿ ಅವರು ಜಮಾಅತಿಗೆ ಮಾಡಿದ ಸೇವೆಗಳ ಬಗ್ಗೆ ಮತ್ತು ಅವರ ಸದ್ಗುಣಗಳ ಬಗ್ಗೆ ವಿವರಿಸಿದರು. ಅವರ ಸಂಬಂಧಿಕರಿಗೆ ಸಹನೆ ದೊರೆಯಲಿ ಎಂದು ಪ್ರಾರ್ಥಿಸಲು ಹೇಳಿದರು.

ಪ್ರೊಫೆಸರ್ ಚೌಧರಿ ಮುಹಮ್ಮದ್ ಅಲಿ ಸಾಹೇಬ್ ಎಂ.ಎ. ವಕೀಲುತ್ತಸ್‌ನೀಫ್ ತಹ್‌ರೀಕ್ ಜದೀದ್ 2015 ಅಗಸ್ಟ್ ದಿನಾಂಕ 14ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُوْنَ 1917ರಲ್ಲಿ ಜನಿಸಿದ ಅವರು ದೀರ್ಘಕಾಲ ಜಮಾಅತ್‌ಗೆ ಸೇವೆ ಸಲ್ಲಿಸಿದ್ದರು. ಅವರ ಮಗ್‌ಫಿರತ್ ಮತ್ತು ಆಧ್ಯಾತ್ಮಿಕ ಉನ್ನತ ಪದವಿಗೆ ಪ್ರಾರ್ಥಿಸಲು ಹುಝೂರ್ ಹೇಳಿದರು. ಅವರ ಹಾಗಿರುವ ನಿಷ್ಠಾವಂತರಾದ ಸೇವಕರು ಜಮಾಅತಿಗೆ ಯಾವಾಗಲೂ ದೊರಕುತ್ತಿರಲಿ ಎಂದು ಪ್ರಾರ್ಥಿಸಲು ಹೇಳಿದರು.}

--------------*****--------------

***Friday Sermon delivered by Hadrath Khaleefatul Masih Al Khamis*** *(atba)*

*at Hadeeqatul Mahdi Jalsagah, London on 21-08-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon